ಹರಪನಹಳ್ಳಿ ಪಟ್ಟಣಕ್ಕೆ ಚರಂಡಿ ವ್ಯವಸ್ಥೆ

೭೬೦. ಶ್ರೀ ಬಿ. ಹೆಚ್. ಯಂಕನಾಯಂಕ್ (ಹರಪನಹಳ್ಳಿ),—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹರಪ್ಪನಹಳ್ಳಿ ಪಟ್ಟಣದಲ್ಲಿ ಒಳಚರಂಡಿ ಹಾಗೂ ಹೊರಚರಂಡಿ ವ್ಯವಸ್ಥೆ ಸರಿಯಾಗಿ ಇಲ್ಲದೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಆ) ಹಾಗಿದ್ದಲ್ಲಿ ಸದರಿ ವ್ಯವಸ್ಥೆಯನ್ನು ಸರಿಪಡಿಸಲು ಸರ್ಕಾರದವರು ಯೋಜನೆ ತಯಾರಿಸಿರುವರೆ ಇಲ್ಲದಿದ್ದಲ್ಲಿ ಯಾವಾಗ ಯೋಜನೆ ತಯಾರಿಸಲಾಗುವುದು ಹಾಗೂ ಯಾವಾಗಿನಿಂದ ಕೆಲಸ ಪ್ರಾರಂಭಿಸಲಾಗುವುದು ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಸಚಿವರು).—

ಅ) ಹೌದು. ಹರಪನಹಳ್ಳಿ ಪಟ್ಟಣದಲ್ಲಿ ಒಳಚರಂಡಿ ವ್ಯವಸ್ಥೆ ಇರುವುದಿಲ್ಲ, ಹೊರಚರಂಡಿ ವ್ಯವಸ್ಥೆ ಪುರಸಭೆ ನೋಡಿಕೊಳ್ಳುತ್ತಿದೆ.

ಆ) ಇಲ್ಲ. ಹರಪ್ಪನಹಳ್ಳಿ ಪಟ್ಟಣಕ್ಕೆ ಒಳಚರಂಡಿ ಯೋಜನೆಯನ್ನು ತೆಗೆದುಕೊಳ್ಳುವುದು ನೀರಿನ ಪ್ರಮಾಣ ಸಾಕಷ್ಟು ಇಲ್ಲದೆ ಮಂಡಳಿಯಿಂದ ಸಾಧ್ಯವಿರುವುದಿಲ್ಲ. ಹೊರಚರಂಡಿ ವ್ಯವಸ್ಥೆ ಸುಧಾರಿಸಲು ಅಥವಾ ಸುಲಭ ಶೌಚಾಲಯ ವ್ಯವಸ್ಥೆ ಮಾಡಲು ಪರಿಶೀಲಿಸುವಂತೆ ಪುರಸಭೆಗೆ ತಿಳಿಸಲಾಗುವುದು.

ಪರಿಶಿಷ್ಟ ಜಾತಿ – ಪಂಗಡದವರಿಗೆ ನಿವೇಶನಗಳ ಹಂಚಿಕೆ

೭೦೬. ಶ್ರೀ ಗೋಪಾಲ ಮುಕುಂದ ಕಾನಡೆ (ಖಿರ್ಸಿ).—ಮಾನ್ಯ ವಾರ್ತಾ, ಪ್ರವಾಸೋದ್ಯಮ ಹಾಗೂ ಸಂಸ್ಕೃತಿ ಹಾಗೂ ಬೆಂಗಳೂರು ಅಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಹೊಸ ನಿವೇಶನಗಳಿಗಾಗಿ ಯಾವ ಯಾವ ಸ್ಥಳಗಳನ್ನು ಆಯ್ಕೆ ಮಾಡಿದೆ ಆ ಪೈಕಿ ಬೆಂಗಳೂರು ನಗರದಲ್ಲಿ ಯಾವ ಯಾವ ಸ್ಥಳವನ್ನು ಆಯ್ಕೆ ಮಾಡಿದೆ ? ಹಾಗೂ ಹರಿಜನ ಗಿರಿಜನರಿಗೆ ಮೀಸಲಿರುವ ಪದ್ಧತಿಯನ್ನು ಸರ್ಕಾರ ಅನುಸರಿಸಿದೆಯೇ ?

ಆ) ಹಾಗಿದ್ದಲ್ಲಿ ಹರಿಜನ ಗಿರಿಜನರಿಗೆ ಒಂದು ಬಿಡಿ ನಿವೇಶನವನ್ನು ಎಷ್ಟು ಬೆಲೆಗೆ ನೀಡಲಾಗುವುದು ?

ಇ) ಉಳಿದವರಿಗೆ ಎಷ್ಟು ಬೆಲೆಗೆ ನೀಡಲಾಗುವುದು ಹಾಗೂ ಇದರಿಂದ ಸರ್ಕಾರಕ್ಕೆ ಬರುವ ಆದಾಯ ಎಷ್ಟು ?

ಶ್ರೀ ಎ.ಪಿ. ಪ್ರಕಾಶ್ (ಬೆಂಗಳೂರು ಅಭಿವೃದ್ಧಿ, ವಾರ್ತಾ, ಪ್ರವಾಸೋದ್ಯಮ ಮಂತ್ರಿಗಳು).—

ಅ) ರಾಜ್ಯದಲ್ಲಿ ಹೊಸ ನಿವೇಶನಗಳಿಗಾಗಿ ಈ ಕೆಳಗೆ ನಮೂದಿಸಿರುವ ಸ್ಥಳಗಳನ್ನು ಆಯ್ಕೆ ಮಾಡಿದೆ.

೧	ಬಳ್ಳಾರಿ	೮	ಗುಲ್ಬರ್ಗ
೨	ಬೆಳಗಾಂ	೯	ಮಂಡ್ಯ
೩	ಬಿಜಾಪುರ	೧೦	ಮೈಸೂರು
೪	ದಾವಣಗೆರೆ	೧೧	ಮಂಗಳೂರು
೫	ಹಾಸನ	೧೨	ಶಿವಮೊಗ್ಗ
೬	ಹೊಸಕೋಟೆ	೧೩	ತುಮಕೂರು
೭	ಹುಬ್ಬಳ್ಳಿ	೧೪	ಬಾಗಲಕೋಟೆ

ನಗರಾಭಿವೃದ್ಧಿ ಪ್ರಾಧಿಕಾರ.